

# ಪರಮ ಸುಂದರಿ ಹಿಟ್ ಕಥನ

ಈ ಸಲ ಗಣೇಶ ಚತುರ್ಥಿ ಸಂದರ್ಭದ 'ಪ್ಲೇಲಿಸ್ಟ್'ನಲ್ಲಿ 'ಪರಮ ಸುಂದರಿ'ಗೆ ಅಗ್ರಸ್ಥಾನ!

ಇಂಥದೊಂದು ತಮಾಷೆಯ ಸಾಲನ್ನು ಫೇಸ್‌ಬುಕ್‌ನಲ್ಲಿ ಗಣೇಶನ ಭಕ್ತರೊಬ್ಬರು ಹಾಕಿದ್ದರು. ಸಾಮಾನ್ಯವಾಗಿ ಪೆಂಡಾಲುಗಳಲ್ಲಿ ಗಣೇಶನನ್ನು ಕೂರಿಸಿದಾಗ ಅಲ್ಲಿನ ಸ್ಪೀಕರ್‌ಗಳಲ್ಲಿ ಹಾಡುಗಳು ಹೊಮ್ಮುತ್ತವೆ. ಅವೆಲ್ಲವೂ ಆಯಾ ವರ್ಷದ ಹಿಟ್‌ಗೀತೆಗಳ 'ಪ್ಲೇಲಿಸ್ಟ್'ನವೇ ಆಗಿರುತ್ತವೆ. ಈ ಸಲ ಗಣೇಶನ ಗಲಾಟೆ ಕೋವಿಡ್ ಕಾರಣದಿಂದಾಗಿ ಹಿಂದಿನಷ್ಟು ಇರಲಿಲ್ಲವಾದರೂ 'ಪರಮ ಸುಂದರಿ'ಯ ನೃತ್ಯ ಲಾಲಿತ್ಯದ ಹಾಡಿಗೆ ಮಾರುಕಟ್ಟೆ ಒದಗಿಬಂದದ್ದು ಸತ್ಯ.

'ಮಿಮಿ' ಹಿಂದಿ ಚಿತ್ರ ಅಷ್ಟೇನೂ ಓಡಲಿಲ್ಲ. ನೆಟ್‌ಫ್ಲಿಕ್ಸ್‌ನಲ್ಲಿ ತೆರೆಕಂಡ ಈ ಸಿನಿಮಾ ಮರಾಠಿ ಚಿತ್ರಕಥೆಯನ್ನು ಆಧರಿಸಿದ್ದು. ವಿಶೇಷವೆಂದರೆ, ಈ ಸಿನಿಮಾದ ಹಾಡಿಗೆ ಸ್ವರ ಸಂಯೋಜನೆ ಮಾಡಿದವರು ಎ.ಆರ್. ರೆಹಮಾನ್. ಮಧುರ ರಾಗಗಳಲ್ಲೇ ದೀರ್ಘಕಾಲದಿಂದ ಕಳೆದುಹೋದಂತೆ ಇದ್ದ ರೆಹಮಾನ್, ಜನಪದವನ್ನೂ ಜನಪ್ರಿಯ ವಾದ್ಯ ಹದವನ್ನೂ ಮೇಳೈಸಿ ಸಂಯೋಜಿಸಿದ ಹಾಡಿದು. ಕೆ.ವಿ. ಸುಬ್ಬಣ್ಣ ಬಹಳ ಹಿಂದೆ, 'ಅವನು ಎದ್ದು ಕುಣಿಯಲೇಬೇಕು ಎನ್ನುವಂತೆ ಸ್ವರ ಸಂಯೋಜಿಸುತ್ತಾನೆ' ಎಂದಿದ್ದರಂತೆ. ಅದನ್ನು ಈ ಹಾಡಿನ ಮೂಲಕ ರೆಹಮಾನ್ ಮತ್ತೆ ರುಜುವಾತು ಪಡಿಸಿದ್ದಾರೆ. ಮಾಧುರ್ಯ ಗೀತೆಗಳಿಂದಲೇ ಗುರುತಾದ ಶ್ರೇಯಾ ಘೋಷಾಲ್ ಇದಕ್ಕೆ ಕಂಠ ನೀಡಿರುವುದು ಇನ್ನೊಂದು ವಿಶೇಷ.

ಈ ಹಾಡು ಇದೇ ವರ್ಷ ಜೂನ್‌ನಲ್ಲಿ ಬಿಡುಗಡೆಯಾಗಿತ್ತು. ಯೂಟ್ಯೂಬ್‌ನಲ್ಲಿ ವಾರದಲ್ಲೇ ಒಂದು ಕೋಟಿಗೂ ಹೆಚ್ಚು ಜನ ವೀಕ್ಷಿಸಿದ್ದು ಸುದ್ದಿ. ಈಗ ಎರಡು ತಿಂಗಳ ಅವಧಿಯಲ್ಲಿ 17 ಕೋಟಿಗೂ ಹೆಚ್ಚು ಮಂದಿ ಈ ಹಾಡನ್ನು ಯೂಟ್ಯೂಬ್‌ನಲ್ಲಿ ಕಣ್ತುಂಬಿಕೊಂಡಿದ್ದಾರೆ.

ದಿಲ್, ಜಿಗರ್, ನಜರ್, ಸನಂ, ಕಸಂ, ಹಮ್‌ಸಫರ್, ಮೆಹಬೂಬ್, ಐತ್‌ಬಾರ್, ಇಜಹಾರ್ ತರಹದ ಪದಪುಂಜಗಳನ್ನು ವ್ಯಾಪಕವಾಗಿ ಹಿಂದಿ ಚಿತ್ರ ಸಾಹಿತ್ಯದಲ್ಲಿ ಬಳಸಿರುವುದನ್ನು ಕಂಡಿದ್ದೇವೆ, ಅಮಿತಾಭ್ ಭಟ್ಟಾಚಾರ್ಯ ಬರೆದಿರುವ ಸಾಹಿತ್ಯದಲ್ಲಿ ಇಂತಹ ಸೂತ್ರವನ್ನು ಚಿಂದಿ ಮಾಡಿರುವುದಕ್ಕೆ ಸಾಕ್ಷ್ಯಗಳಿವೆ. 'ಪರಮ್ ಸುಂದರಿ' ಎಂಬ ಬಳಕೆಯೇ ಇಡೀ ದೇಶದ ಎಲ್ಲ ಭಾಷೆಗಳವರಿಗೂ ಅರ್ಥವಾಗುವಂಥ ಜಾಣತನ. ಅದನ್ನು ಲಯಕೇಂದ್ರವಾಗಿಸಿ ರೆಹಮಾನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ತುಂಟತನ, ಲವಲವಿಕೆಯ ಸಾಹಿತ್ಯ ಚಿತ್ರಕಥಾ ನಾಯಕಿಯ ಪಾತ್ರದ ರೂಹನ್ನೂ ಅರುಹುತ್ತದೆ.

ಈ ಹಾಡಿನ ಲಯ ಕಂಡು ಬಿಗ್ ಬಾಸ್‌ನಲ್ಲಿ ಸ್ಪರ್ಧಿಸಿ ಬಂದ ಕಿರುತೆರೆ ನಟಿ ವೈಷ್ಣವಿ ಕೂಡ ನೃತ್ಯ ಲಾಲಿತ್ಯದ ವಿಡಿಯೊ ರೆಕಾರ್ಡ್ ಮಾಡಿ ಹಾಕಿದ್ದು ಇದರ ಜನಪ್ರಿಯತೆಗೆ ಹಿಡಿದ ಇನ್ನೊಂದು ಕನ್ನಡಿ. ■

# ಸೋನಾಕ್ಷಿ ಸಿಟ್ಟು



ಸೋನಾಕ್ಷಿ ಸಿನ್ಹಗೆ 'ಸ್ವಜನ ಪಕ್ಷಪಾತ' (ನೆಪೋಟಿಸಂ) ಕುರಿತ ಚರ್ಚೆ ಕೇಳಿ ಕೇಳಿ ರೋಸಿಹೋಗಿದೆ. ಅವರು ಸಂದರ್ಶನವೊಂದರಲ್ಲಿ ಇದನ್ನೇ ಕುರಿತು ಎದುರಾದ ಪ್ರಶ್ನೆಗೆ ಕೋಪವನ್ನು ಸವರಿಯೇ ಉತ್ತರಿಸಿದ್ದಾರೆ.

'ನನ್ನ ಅಪ್ಪ ತಾರೆಯ ಮಗ ಆಗಿರಲಿಲ್ಲ. ಅವರೂ ಎಷ್ಟೋ ಸಿನಿಮಾಗಳನ್ನು ಕಳೆದುಕೊಂಡರು. ಆಮೇಲೆ ಕಷ್ಟಪಟ್ಟರು. ಅವಕಾಶಗಳನ್ನು ಹುಡುಕಿದರು. ಬೆಳೆದರು. ನಾನು ಅವಳ ಮಗಳು ಎನ್ನುವ ಕಾರಣಕ್ಕಷ್ಟೇ ಯಾರೂ ಅವಕಾಶಗಳನ್ನು ಕರೆದು ಕೊಡುವುದಿಲ್ಲ. ನನ್ನಲ್ಲಿ ಅಭಿನಯ ಸಾಮರ್ಥ್ಯ ಇದ್ದರಷ್ಟೇ ಉಳಿಗಾಲ. ಕುಟುಂಬದ ಹಿನ್ನೆಲೆಯ ಕಾರಣಕ್ಕಾಗಿ ಪ್ರವೇಶ ಸಿಗಬಹುದು. ಹಾಗೆಂದು ಸದಾ ಕಾಲ ಅದೇ ಕಾಪಾಡುತ್ತದೆ ಎನ್ನುವುದು ಸುಳ್ಳು. ನನಗೆ ಬಂದ ಅವಕಾಶ ಕೈತಪ್ಪಿದ ಉದಾಹರಣೆಗಳೂ ಇವೆ' ಎಂದು ಸೋನಾಕ್ಷಿ ಅನುಭವ ನುಡಿಯನ್ನು ಉತ್ತರವನ್ನಾಗಿ ಹೇಳಿದರು.

ಎಲ್ಲ ಕ್ಷೇತ್ರಗಳಲ್ಲೂ ಕೆಲವರಿಗೆ ಸುಲಭವಾಗಿ ಅವಕಾಶಗಳು ಸಿಗುತ್ತವೆ. ಹಾಗೆಂದು ಅದೊಂದರಿಂದಲೇ ಅವರ ಪ್ರಗತಿ ಸಾಧ್ಯ ಎನ್ನಲಾಗದು. ಪ್ರಯತ್ನ, ಶ್ರದ್ಧೆ, ಹೋರಾಟ ಎಲ್ಲರ ಬದುಕಿನಲ್ಲೂ ಬಗೆ ಬಗೆಯಾಗಿ ಇರುತ್ತದೆ. ಇದನ್ನೊಂದು ದೊಡ್ಡ ಸಮಸ್ಯೆ ಎಂದು ಬಿಂಬಿಸಿ ಕೆಲವರು ಮಾತನಾಡಿದಾಗ ಏನು ಹೇಳಬೇಕೋ ತೋಚುವುದಿಲ್ಲ ಎಂದೂ ಸೋನಾಕ್ಷಿ ಮಾತು ಸೇರಿಸಿದರು.

'ಸಾಕಿನ್ನು ಈ ಚರ್ಚೆ' ಎಂದು ಆ ಪ್ರಶ್ನೆಗೆ ಅವರು ಪೂರ್ಣವಿರಾಮ ಇಟ್ಟ ರೀತಿಯಲ್ಲೇ ಅವರ ಮನಸ್ಸು ಅನಾವರಣಗೊಂಡಿತು.

■ ವಿಶಾಖ ಎನ್.